153 ನೇ
ನಿ = 72
SLAoi 88

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರ
## ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ :** **ಮಂಗಳೂರು ನಗರದಲ್ಲಿ ದಿನಾಂಕ: 19.12.2019 ರಲ್ಲಿ ನಡೆದ ಸಿಎಎ/ಎನ್ಆರ್‌ಸಿ ಚಳುವಳಿ ವೇಳೆ ಪೊಲೀಸ್ ಗೋಲಿಬಾರ್‌ನಿಂದ ಮೃತಪಟ್ಟ ನೌಸೀರ್ ಮತ್ತು ಅಬ್ದುಲ್ ಜಲೀಲ್ ಮಹಮದ್ ಇವರು ಪೊಲೀಸ್ ಗುಂಡೇಟಿಗೆ ಬಲಿಯಾಗಿದ್ದು, ಮಾನ್ಯ ಮುಖ್ಯಮಂತ್ರಿಗಳು ಈ ಕುಟುಂಬಗಳಿಗೆ ಪರಿಹಾರ ಘೋಷಣೆ ಮಾಡಿದ್ದರೂ, ಇದುವರೆಗೂ ಪರಿಹಾರ ಪಾವತಿಸಿರುವುದಿಲ್ಲ ಎಂಬುದರ ಬಗ್ಗೆ.**

**ಉತ್ತರ:** 2019ರಲ್ಲಿ ಕೇಂದ್ರ ಸರಕಾರವು ಪೌರತ್ವ ತಿದ್ದುಪಡಿ ಕಾಯಿದೆಯನ್ನು ಜಾರಿಗೊಳಿಸಿರುವುದನ್ನು ವಿರೋಧಿಸಿ ದೇಶಾದ್ಯಂತ ಪ್ರತಿಭಟನೆಗಳು ನಡೆಯುತ್ತಿದ್ದ ಸಮಯದಲ್ಲಿ ಮಂಗಳೂರಿನಲ್ಲಿ ಕೂಡ ಹಲವಾರು ಸಂಘಟನೆಯವರು ಈ ಕಾಯಿದೆಯನ್ನು ವಿರೋಧಿಸಿ ಪ್ರತಿಭಟನೆಯನ್ನು ನಡೆಸಿರುತ್ತಾರೆ. ದಿನಾಂಕ: 19.12.2019 ರಂದು ಮದ್ಯಾಹ್ನ 14.30 ಗಂಟೆ ಸಮಯಕ್ಕೆ ಸುಮಾರು 500-600 ಜನ ಪ್ರತಿಭಟನಾಕಾರರು ಒಮ್ಮೆಲೇ ಕೇಂದ್ರ ಸರಕಾರ ವಿರುದ್ಧ, ಸಿ.ಎ.ಎ ಕಾಯಿದೆಯ ವಿರುದ್ಧ, ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಡಿಸಿ ಕಛೇರಿಯ ಕಡೆಗೆ ನುಗ್ಗಲು ಪ್ರಯತ್ನಿಸುತ್ತಾರೆ. ಆಗ ಅಲ್ಲಿ ಕರ್ತವ್ಯದಲ್ಲಿದ್ದ, ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಅವರನ್ನು ತಡೆದು ನಿಷೇದಾಜ್ಞೆಯ ಸಮಯದಲ್ಲಿ ನೀವು ಅಕ್ರಮ ಕೂಟ ಸೇರಿರುವುದು ಕಾನೂನು ಬಾಹಿರವಾಗಿರುವುದಾಗಿ ತಿಳಿಸಿ, ಅಲ್ಲಿಂದ ತೆರಳುವಂತೆ ಅವರುಗಳಿಗೆ ಮನವಿಯನ್ನು ಮಾಡಿದರೂ, ಅವರುಗಳು ಮಾತನ್ನು ಕೇಳದೆ ಕೇಂದ್ರ ಸರಕಾರದ ವಿರುದ್ಧ, ಸಿ.ಎ.ಎ ಕಾಯಿದೆಯ ವಿರುದ್ಧ, ಪೊಲೀಸರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಕರ್ತವ್ಯದಲ್ಲಿದ್ದ ಪೊಲೀಸರ ಮೇಲೆ, ಸ್ಟೇಟ್ ಬ್ಯಾಂಕ್ ಕಟ್ಟಡಕ್ಕೆ ಕಲ್ಲು ತೂರಾಟ ಮಾಡಿ ಕಿಟಕಿಗಳನ್ನು ಒಡೆದು ಸಾರ್ವಜನಿಕ ಆಸ್ತಿ-ಪಾಸ್ತಿ ಹಾನಿಮಾಡುತ್ತಿರುವುದನ್ನು ಮನಗಂಡು ಡಿ.ಸಿ.ಪಿ ರವರು ಅಶ್ರುವಾಯು ಪ್ರಯೋಗಿಸಲು ಆದೇಶ ಮಾಡಿದರೂ ನಿಯಂತ್ರಣಕ್ಕೆ ಬಾರದೇ ಇದ್ದಾಗ ಲಾಠಿ ಚಾರ್ಜ್ ಮಾಡುವಂತೆ ಆದೇಶವನ್ನು ಮಾಡಿದಂತೆ ಲಾಠಿ ಚಾರ್ಜ್ ಮಾಡಲಾಗಿರುತ್ತದೆ.

ಮುಂದುವರಿದಂತೆ ಸಂಜೆ ಸುಮಾರು 4.00 ಗಂಟೆಯ ಸಮಯಕ್ಕೆ ಉದ್ರಿಕ್ತರ ಗುಂಪು ಮಂ.ಉತ್ತರ ಠಾಣೆಗೆ ಸಂಪರ್ಕ ಇರುವ ಬಿಬಿ ಅಲಾಬಿ ರಸ್ತೆ, ಅಜೀಜುದ್ದೀನ್ ರಸ್ತೆ, ಜೆ.ಎಂ ರಸ್ತೆ, ನೆಲ್ಲಿಕಾಯಿ ರಸ್ತೆ, ಕೆನರಾ ಗೂಡ್ಸ್ ರಸ್ತೆ ಮುಂತಾದ ಕಡೆಗಳಲ್ಲಿ ಗುಜುರಿ ಸಾಮಾನುಗಳಾದ ಕಬ್ಬಿಣದ ಪೈಪ್, ತಳ್ಳುಗಾಡಿ, ಕಲ್ಲು, ಬಾಟಲಿಗಳನ್ನು ರಸ್ತೆಗೆ ಅಡ್ಡವಾಗಿ ಇಟ್ಟು, ಟಯರ್ ಗಳನ್ನು ರಸ್ತೆಗೆ ಅಡ್ಡವಾಗಿಟ್ಟು ಬೆಂಕಿ ಹಚ್ಚಿ ಸದ್ರಿ ರಸ್ತೆಯಲ್ಲಿ ಯಾವುದೇ ಗಾಡಿ, ವಾಹನಗಳು ಬಾರದಂತೆ ತಡೆದು ಮಂಗಳೂರು ಉತ್ತರ ಠಾಣೆಗೆ ಹಾಗೂ ಠಾಣೆಯ ಮೇಲ್ಛಾವಣಿಗೆ ಕಲ್ಲು, ಸೋಡಾ ಬಾಟಲಿಗಳನ್ನು ಎಸೆದು ಹಾನಿ ಮಾಡಲು ಪ್ರಾರಂಭಿಸಿದರು. ನಂತರ ಠಾಣಾ ಆವರಣದಲ್ಲಿ ಪ್ರಕರಣವೊಂದರಲ್ಲಿ ಸ್ವಾದೀನಪಡಿಸಿಕೊಂಡು ನಿಲ್ಲಿಸಿದ್ದ ಲಾರಿಗೆ ಬೆಂಕಿ ಹಚ್ಚಿದ ಟಯರ್‌ಗಳನ್ನು ಎಸೆದು ಠಾಣೆಯನ್ನು ಸುಟ್ಟು ಹಾಕಲು ಪ್ರಯತ್ನಿಸಿರುತ್ತಾರೆ. ಸದ್ರಿ ಸಮಯದಲ್ಲಿ ಗಲಾಟೆ ಹತೋಟಿಗೆ ಬಾರದೇ ಇರುವುದನ್ನು ಕಂಡು ಡಿ.ಸಿ.ಪಿ (ಕಾ ಮತ್ತು ಸು) ರವರು ಸ್ಥಳಕ್ಕೆ ಬಂದು ಉದ್ರಿಕ್ತರ ಗುಂಪನ್ನು ಚದುರುವಂತೆ ಮೆಗಾಪೋನ್‌ಗಳ ಮೂಲಕ ಘೋಷಿಸಿ ಪ್ರಯತ್ನಿಸಿದರೂ, ಗುಂಪು ಚದುರದೇ ಪೊಲೀಸ್ ಠಾಣೆಯ ಮೇಲೆ ಕಲ್ಲು ತೂರಾಟವನ್ನು ಮಾಡುತ್ತಲೇ ಇರುವುದನ್ನು ಕಂಡು ಬಳಿಕ ಅಶ್ರುವಾಯು, ಟಿಯರ್ ಗ್ಯಾಸ್ ಗಳನ್ನು ಪ್ರಯೋಗ ಮಾಡಿದರೂ ಉದ್ರಿಕ್ತರ ಗುಂಪು ಇನ್ನೇನು ಠಾಣೆಯ ಕಟ್ಟಡಕ್ಕೆ ಪ್ರವೇಶಿಸುತ್ತದೆ ಎನ್ನುವಾಗ ಗುಂಪನ್ನು

ಚದುರಿಸಲು, ಸಾರ್ವಜನಿಕ ಆಸ್ತಿ-ಪಾಸ್ತಿ ರಕ್ಷಣೆ ಹಾಗೂ ತನ್ನ ಆತ್ಮ ರಕ್ಷಣೆಗಾಗಿ ತನ್ನ ಇಲಾಖಾ ಪಿಸ್ತೂಲ್ ಮೂಲಕ ಗಾಳಿಯಲ್ಲಿ ಗುಂಡನ್ನು ಹಾರಿಸಿದರು. ಆದರೂ ಉದ್ರಿಕ್ತರ ಗುಂಪು ಪೊಲೀಸರ ಮೇಲೆಯೇ ಕಲ್ಲು ತೂರಾಟವನ್ನು ಮಾಡುತ್ತಿತ್ತು. ಕಲ್ಲು ತೂರಾಟದಿಂದ ಡಿ.ಸಿ.ಪಿ ರವರ ಕೈಗೆ ಕೂಡ ಗಾಯವಾಗಿರುತ್ತದೆ. ಅಲ್ಲದೇ ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಗಾಯವಾಗಿರುತ್ತದೆ. ಪರಿಸ್ಥಿತಿಯನ್ನು ಹತೋಟಿಗೆ ತರಲು ಮಾಡಿದ ಎಲ್ಲಾ ಪ್ರಯತ್ನಗಳು ವಿಫಲವಾದಾಗ ಕೊನೆಗೆ ಅನಿವಾರ್ಯವಾಗಿ ತನ್ನ ಸಿಬ್ಬಂದಿಗಳ ಜೀವ ಹಾನಿ, ಸಾರ್ವಜನಿಕ ಆಸ್ತಿಪಾಸ್ತಿ ಹಾನಿಯನ್ನು ತಡೆಯಲು ಡಿ.ಸಿ.ಪಿ ರವರು ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ಅಧಿಕಾರಿಗಳಿಗೆ .303 ರೈಫಲ್ ತೆಗೆದುಕೊಂಡು ಗಾಳಿಯಲ್ಲಿ ಗುಂಡು ಹಾರಿಸುವಂತೆ ಸೂಚಿಸಿದಂತೆ ಗುಂಡು ಹಾರಿಸಿದಾಗ ಉದ್ರಿಕ್ತರ ಗುಂಪಿನಲ್ಲಿದ್ದು ಗಲಾಟೆ ಮಾಡುತ್ತಿದ್ದ ನೌಸೀನ್, ಅಬ್ದುಲ್ ಜಲೀಲ್, ಇರ್ಫಾನ್@ಮೊಹಮ್ಮದ್ ಇರ್ಫಾನ್, ಶಫಿಕ್@ಮೊಹಮ್ಮದ್ ಶಫಿಕ್, ಸಲೀಂ ಖಾನ್, ಅಬುಸಾಲಿ, ಮೊಹಮ್ಮದ್ ಇಮ್ರಾನ್, ನಿಜಾಮುದ್ದೀನ್, ಮೊಹಮ್ಮದ್ ಆಸೀಫ್ ಎಂಬವರು ಗಾಯಗೊಂಡರು. ಕೂಡಲೇ ಸದ್ರಿ ಉದ್ರಿಕ್ತರ ಗುಂಪು ಚದುರಿತು. ಅಲ್ಲದೇ ಗಾಯಗೊಂಡವರನ್ನು ಉದ್ರಿಕ್ತರ ಗುಂಪಿನಲ್ಲಿದ್ದವರೇ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಗಾಯಗೊಂಡವರಲ್ಲಿ ಕುದ್ರೋಳಿಯ ನೌಸೀನ್ ಹಾಗೂ ಕಂದುಕದ ಅಬ್ದುಲ್ ಜಲೀಲ್ ಎಂಬವರು ಚಿಕಿತ್ಸೆ ಫಲಿಸದೇ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ದಿನಾಂಕ: 19.12.2019 ರಂದು ಮಂಗಳೂರು ನಗರದಲ್ಲಿ ನಡೆದ ಈ ಗಲಾಟೆಯಲ್ಲಿ ಸಾಕಷ್ಟು ಸಾರ್ವಜನಿಕ ಆಸ್ತಿಪಾಸ್ತಿ ಹಾನಿಯಾಗಿರುವುದಲ್ಲದೇ, ಹಲವಾರು ಸಾರ್ವಜನಿಕರು ಸೇರಿದಂತೆ, ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಗಾಯಗೊಂಡಿದ್ದು, ಈ ಬಗ್ಗೆ ಮಂಗಳೂರು ಉತ್ತರ ಠಾಣೆಯಲ್ಲಿ ಹಾಗೂ ಮಂಗಳೂರು ದಕ್ಷಿಣ ಠಾಣೆಯಲ್ಲಿ ಸುಮಾರು 20 ಪ್ರಕರಣಗಳು ದಾಖಲಾಗಿರುತ್ತದೆ. ಅಲ್ಲದೇ ದಿನಾಂಕ: 19.12.2019 ನಡೆದ ಈ ಘಟನೆಯ ಬಗ್ಗೆ ಸರ್ಕಾರವು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಉಡುಪಿ ಜಿಲ್ಲೆ ಇವರನ್ನು ಮ್ಯಾಜಿಸ್ಟೀರಿಯಲ್ ವಿಚಾರಣೆ (Magisterial Enquiry) ಅಧಿಕಾರಿಯನ್ನಾಗಿ ನೇಮಿಸಿ ತನಿಖೆಗೆ ಆದೇಶಿಸಿರುತ್ತದೆ. ಸದರಿ ವಿಚಾರಣೆ ವರದಿಯಲ್ಲಿಯೂ ಸಹ, ಈ ಘಟನೆ ನಡೆದ ದಿನ ಉದ್ರಿಕ್ತರ ಗುಂಪು ಹೆಚ್ಚಿನ ಪ್ರಮಾಣದಲ್ಲಿ ದೊಂಬಿ ನಡೆಸುವ ಸಾಧ್ಯತೆ ಇದ್ದುದರಿಂದ, ಪೊಲೀಸರು ಗೋಲಿಬಾರ್ ಮಾಡುವ ಅನಿವಾರ್ಯತೆ ಇತ್ತು ಎಂದು ವರದಿಯನ್ನು ಸಲ್ಲಿಸಿರುತ್ತಾರೆ. ಈ ನ್ಯಾಯಾಂಗ ತನಿಖಾ ವರದಿಯನ್ನು ಸರ್ಕಾರವು ಒಪ್ಪಿಕೊಂಡಿರುವುದರಿಂದ, ಪರಿಹಾರವನ್ನು ಘೋಷಿಸುವ ಕುರಿತು ಯಾವುದೇ ತೀರ್ಮಾನವನ್ನು ಕೈಗೊಂಡಿರುವುದಿಲ್ಲ.

---

**ಸಂಖ್ಯೆ: ಹೆಚ್‌ಡಿ 91 ಪಿಸಿಇ 2024**

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು